

ಬಿ.ವಿ. ಕಾರಂತ ಹಾಗೂ ಜಿ.ವಿ. ಅಯ್ಯರ್: 'ಹಂಸಗೀತೆ'ಗೆ ಜೀವತುಂಬಿದ ಜೋಡಿ

ದಿಗ್ಗಜರೇ. ಕೃತಿಗಳೂ ಕೂಡ ಕರ್ನಾಟಕ ಸಂಗೀತದ ದಿಗ್ಗಜರವು. ಪುರಂದರದಾಸ, ಊತ್ತುಕಾಡು ವೆಂಕಟಸುಬ್ಬಯ್ಯರ್, ಜಯದೇವ, ಶಾಮಾ ಶಾಸ್ತ್ರಿ, ಮುತ್ತುಸ್ವಾಮಿ ದೀಕ್ಷಿತರ ಕೃತಿಗಳನ್ನು ಬಾಲಮುರಳಿ ಕೃಷ್ಣ, ಎಂ.ಎಲ್. ವಸಂತಕುಮಾರಿ, ರಾಮಮೂರ್ತಿ, ಪಿ. ಲೀಲಾ, ಬಿ.ವಿ. ವಸಂತ ಹಾಗೂ ಬಿ.ಕೆ. ಸುಮಿತ್ರಾ ಹಾಡಿದ್ದಾರೆ. 'ಅನಂತ ಅನಂತ ತಾನಂ...' ಮನೋಜ್ಞ ಸಂಗೀತದ ಗಾರುಡಿಯಿಂದ ಆರಂಭವಾಗುವ ಚಿತ್ರ, ನಂತರ 'ಹಿಮಾದ್ರಿಸುತೇ ಪಾಹಿಮಾಂ', 'ಚಿಂತಾಂ ನಾಸ್ತಿಕಿಲಾಂ', 'ಮಾನಮಯೆ', 'ಕಾಳಿಂಗ ನರ್ತನ ತಿಲ್ಲಾನ', 'ಶ್ರೀ ಸರಸ್ವತಿ ನಮೋಸ್ತುತೆ...', ಜಯದೇವನ ಅಷ್ಟಪದಿ, ಗೀತಾ ಗೋವಿಂದದ 'ನಾಥಹರೇ....', 'ಸಾ..ಮ..ನಿ..ಗ..ಮ.. ಸುಧಾ...', 'ತವ ವಿರಹೆ ವನಮಾಲಿ'ಯ ಜಾಡಿನಲ್ಲಿ ನಡೆದು, 'ಅಂಬಾ ತವಪದಾಂಭೋಜ'ದೊಂದಿಗೆ ಇದ್ದಕ್ಕಿದ್ದಂತೆ ಅಂತ್ಯಗೊಳ್ಳುತ್ತದೆ.

## ಮಾತು ಬೆಳ್ಳಿ, ಮೌನ ಬಂಗಾರ

ಸುಮಾರು 156 ನಿಮಿಷಗಳ 'ಹಂಸಗೀತೆ' ಚಿತ್ರದಲ್ಲಿರುವುದು ಕೇವಲ ಹದಿನೆಂಟು ನಿಮಿಷದ ಸಂಭಾಷಣೆ. ಇದನ್ನು ಕುರಿತು, ಅಯ್ಯರ್ ವಿವರಣೆ ಹೀಗಿದೆ: "ಹಂಸಗೀತೆಯಲ್ಲಿ ನಾನು ಮಾತನ್ನು ಕಡಿಮೆ ಮಾಡಿದ ಬಗ್ಗೆ ಕೆಲವು ಪತ್ರಕರ್ತ ಮಿತ್ರರು, 'ಬೇರೆ ಭಾಷೆಗೆ ಚಿತ್ರ ಡಬ್ ಮಾಡಬೇಕೆಂದು ಅಯ್ಯರ್ ಮಾತುಗಳನ್ನು ಕಡಿಮೆ ಮಾಡಿದ್ದಾರೆ' ಎಂದು ಬರೆದರು. ನಿಜಕ್ಕೂ ನನ್ನ ಉದ್ದೇಶ ಅದಾಗಿರಲಿಲ್ಲ. ಉಪಯುಕ್ತವಿಲ್ಲದ ಮಾತು, ಚಲನಚಿತ್ರಕ್ಕೆ ಅವಶ್ಯಕವಿಲ್ಲವೆಂದೇ ಕಡಿಮೆ ಮಾಡಿದೆ. ಮೇಲಾಗಿ ಮೌನ ಮಾತಿಗಿಂತ ಹೆಚ್ಚು ವಿಷಯ ಸಂವೇದಿಸಬಲ್ಲದು ಎಂಬುದು ಮತ್ತೊಂದು ಕಾರಣ. 'ಹಂಸಗೀತೆ' ಕಾದಂಬರಿಯ ಆರಂಭದಲ್ಲಿ ತರಾಸುರವರು ತಾವು ಕಥೆಯನ್ನು ಅರಿಯಲು ಮೂವರನ್ನು ಸಂಧಿಸುವ ಪ್ರಕರಣವಿದೆ. ಇಂದಿನ ತರಾಸು ಇಂದಿನ